

## ಬೇಕಿದೆ ಒನ್ ಸ್ಟಾಪ್ ಸೆಂಟರ್

ಅತ್ಯಾಚಾರ ಸಂತ್ರಸ್ತೆಗೆ ಚಿಕಿತ್ಸೆ ನೀಡುವುದು, ಕೌನ್ಸೆಲಿಂಗ್ ನಡೆಸುವುದು ಮತ್ತು ದೂರು ನೀಡುವುದು ಒಂದೇ ಸೂರಿನಡಿ ಆಗುವಂಥ ವ್ಯವಸ್ಥೆ ರೂಪಿತವಾಗಬೇಕು. ದೈಹಿಕ, ಮಾನಸಿಕವಾಗಿ ಆಘಾತವಾಗಿರುವ ಅತ್ಯಾಚಾರ ಸಂತ್ರಸ್ತೆ ಪದೇ ಪದೇ ಪೊಲೀಸ್ ಠಾಣೆ, ಆಸ್ಪತ್ರೆಗೆ ಅಲೆಯಬೇಕಾಗುತ್ತದೆ. ಇದನ್ನು ತಡೆಯಲು ಒಂದೇ ಸೂರಿನಡಿಯ ವ್ಯವಸ್ಥೆ ಅಗತ್ಯವಿದೆ. ಆಕೆಗೆ ಧೈರ್ಯ ಕೊಡುವ ಒನ್ ಸ್ಟಾಪ್ ಸೆಂಟರ್‌ಗಳ ಅಗತ್ಯವಿದೆ. ಇವು ಜಿಲ್ಲಾಮಟ್ಟದಲ್ಲೂ ರೂಪಿತವಾಗಬೇಕು. ಈ ಕುರಿತು ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗಾಗಿ ವಿ.ಎಸ್. ಉಗ್ರಪ್ಪ ಅಧ್ಯಕ್ಷತೆ ಸಮಿತಿ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ನ್ಯಾಯಾಲಯ, ಪೊಲೀಸ್ ಇಲಾಖೆ, ಆಸ್ಪತ್ರೆ ಇವುಗಳು ಮಹಿಳಾಸ್ನೇಹಿ ಆಗಿರಬೇಕು. ಇಲ್ಲಿನ ಸಿಬ್ಬಂದಿ ಲಿಂಗಸೂಕ್ಷ್ಮತೆ ಹೊಂದಿರಬೇಕು.ಅಗತ್ಯಬಿದ್ದರೆ ಕಾರ್ಯಾಗಾರ ನಡೆಸಬೇಕು. ಅತ್ಯಾಚಾರ ಪ್ರಕರಣಗಳಲ್ಲಿ ಹೆಣ್ಣನ್ನೇ ಅನುಮಾನದಿಂದ ನೋಡುವುದು ಸಲ್ಲದು. ಲಿಂಗಸೂಕ್ಷ್ಮತೆ ಮೂಡಿಸಲು ಶಾಲಾ–ಕಾಲೇಜು ಪಠ್ಯದಲ್ಲಿ ಆರೋಗ್ಯಕರ ಲೈಂಗಿಕ ಶಿಕ್ಷಣ ಅಗತ್ಯ. ಲೈಂಗಿಕತೆಯಿಂದ ದೈಹಿಕ ಮತ್ತು ಮಾನಸಿಕವಾಗಿ ಆಗುವ ಪರಿಣಾಮಗಳ ಬಗ್ಗೆ ಹೇಳಬೇಕಿದೆ. ಇದಕ್ಕೆ ಮೊದಲು ಶಿಕ್ಷಕರಿಗೆ ತರಬೇತಿ ಆಗಬೇಕು. ಇದರಿಂದ ಪೋಕ್ಸೊದಂಥ ಪ್ರಕರಣಗಳನ್ನು ತಡೆಯಬಹುದು.

ಯಾವುದೇ ಹೆಣ್ಣು ಒಂಟಿಯಾಗಿ ಸಿಕ್ಕರೆ ಆಕೆಯನ್ನು ದುರುಪಯೋಗಪಡಿಸಿಕೊಳ್ಳುವ ಪುರುಷ ಆಲೋಚನಾ ಧಾಟಿಯನ್ನು ಬದಲಿಸಬೇಕಿದೆ. ಇದಕ್ಕೆ ಮುಖ್ಯವಾಗಿ ಕುಟುಂಬದಲ್ಲಿ ಗಟ್ಟಿಯಾದ ತಳಪಾಯ ಹಾಕಬೇಕಿದೆ. ಹೆಣ್ಣು–ಗಂಡು ಸಮಾನರು ಎನ್ನುವ ಜತೆಗೆ ಹೆಣ್ಣು ಮಕ್ಕಳ ಜತೆಗೆ ಹೇಗೆ ನಡೆದುಕೊಳ್ಳಬೇಕೆಂಬ ಲಿಂಗಸೂಕ್ಷ್ಮತೆಯನ್ನೂ ಕಲಿಸಬೇಕಿದೆ.

**-ಡಾ.ವಸುಂಧರಾ ಭೂಪತಿ,**
ಸದಸ್ಯೆ, ವಿ.ಎಸ್. ಉಗ್ರಪ್ಪ ಅಧ್ಯಕ್ಷತೆ ಸಮಿತಿ



ಮೂಲಕ ಮಹಿಳೆಯೊಬ್ಬಳ ಖಾಸಗಿತನವನ್ನೇ ನಾಶಮಾಡುತ್ತದೆ' ಎಂದು 1996ರ ಬೋಧಿಸತ್ವ ವರ್ಸಸ್ ಶುಭ್ರಾ ಚಕ್ರವರ್ತಿ ಪ್ರಕರಣದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಆದರೆ, ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯದ ಮೂಲಕ ಮಾನವೀಯತೆಯನ್ನು ಮತ್ತೆ ಮತ್ತೆ ಗಾಸಿಗೊಳಿಸಲಾಗುತ್ತಲೇ ಇದೆ.

### ಅನುದಿನವೂ ದೌರ್ಜನ್ಯ...

ದೇಶದಲ್ಲಿ ಪ್ರತಿ 10 ನಿಮಿಷಕ್ಕೆ ಓರ್ವ ಹೆಣ್ಣಿನ ಮೇಲೆ ಮೇಲೆ ಲೈಂಗಿಕ ದೌರ್ಜನ್ಯ, ಪ್ರತಿ 15 ನಿಮಿಷಕ್ಕೆ ಒಂದು ಅತ್ಯಾಚಾರ ನಡೆಯುತ್ತದೆ ಎನ್ನುತ್ತವೆ ಅಂಕಿ–ಅಂಶ. ಇದನ್ನು ಆಧರಿಸಿ ಲೆಕ್ಕಹಾಕಿದರೆ, ನಡೆಯುವ ಅತ್ಯಾಚಾರ ಪ್ರಕರಣಗಳ ಪೈಕಿ ವರದಿಯಾಗುವುದು ಹಾಗೂ ದೂರು ದಾಖಲಾಗುವ ಪ್ರಕರಣಗಳ ಸಂಖ್ಯೆ ಕೇವಲ ಕಾಲು ಭಾಗದಷ್ಟು ಮಾತ್ರ. ಉಳಿದ ಮುಕ್ಕಾಲು ಅತ್ಯಾಚಾರ ಪ್ರಕರಣಗಳು ಸಂತ್ರಸ್ತೆಯ ಮೌನರೋದನದಲ್ಲೋ, ಅಸಹಾಯಕ ಬಿಕ್ಕಳಿಕೆಯಲ್ಲೋ, ಸಾವಿನಲ್ಲೋ, ಒಪ್ಪಂದದಲ್ಲೋ, ಪೋಷಕರ ಒತ್ತಾಯದಿಂದ ಅಪರಾಧಿ ಜತೆಗೆ ಮದುವೆಯಲ್ಲೋ ಮುಕ್ತಾಯವಾಗುವುದೇ ಹೆಚ್ಚು.

ಕಠಿಣ ಕಾನೂನಿನ ಕಬಂಧ ಬಾಹುಗಳಿಂದಲೂ ಅಪರಾಧಿಗಳು ಸುಲಭವಾಗಿ ತಪ್ಪಿಸಿಕೊಳ್ಳುತ್ತಿರುವ ಹಿಂದಿನ ಕಾರಣ ಹುಡುಕ ಹೊರಟರೆ, ಕೊನೆಗಾಣದಷ್ಟು ಸಂಗತಿಗಳು ತೆರೆದುಕೊಳ್ಳುತ್ತಾ